ಓ.ಎಸ್.ನಂ.116/2021

**ಪಿ ಡಬ್ಲ್ಯೂ: 3**

| | | |
|---|---|---|
| ಸಾಕ್ಷಿಯ ಹೆಸರು | : | ರಮೇಶ ಎಂ ಜಿ |
| ತಂದೆಯ ಹೆಸರು | : | ಗುಡ್ಡಪ್ಪ |
| ವಯಸ್ಸು | : | 42 |
| ಉದ್ಯೋಗ | : | ತಾಲೂಕಾ ಸರ್ವೆಯರ್ |
| ವಾಸಸ್ಥಳ | : | ರಾಣೇಬೆನ್ನೂರು |

ದಿನಾಂಕ 30-05-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ವಾದಿ ಪರ ಶ್ರೀ ಎನ್ ವಿ ಸಿ ವಕೀಲರಿಂದ:-**

ನಾನು 2014 ರಿಂದ ರಾಣೇಬೆನ್ನೂರು ತಾಲೂಕಿನಲ್ಲಿ ಸರ್ವೆಯರ್ ಆಗಿ ಕೆಲಸ ಮಾಡುತ್ತಿರುತ್ತೇನೆ. ದಿ: 22-08-2019 ರಂದು ತಮ್ಮ ಆಸ್ತಿಯಾದ ರಿ ಸ ನಂ 757/4 ಒಟ್ಟು ಕ್ಷೇತ್ರ 10 ಎಕರೆ, 26 ಗುಂಟೆ ಜಮೀನಿನ ಅಳತೆ ಮಾಡುವ ಕುರಿತು ನಮ್ಮ ಕಛೇರಿಗೆ ಅರ್ಜಿ ನೀಡಿದ್ದು, ಅದರಂತೆ ದಿ: 23-12-2019 ರಲ್ಲಿ ಅಳತೆ ಮಾಡುವ ಕುರಿತು ದಿನಾಂಕ ನಿಗದಿ ಪಡಿಸಿ, ಅರ್ಜಿದಾರರಿಗೆ, ಲಾಗುದಾರರಾದ ಲೀಯಾಕತ್ ಅಲಿ ರಬ್ಬಾನಿ, ಹನುಮಂತಪ್ಪ ಐಯಜ್ಜನವರ, ಅಶೋಕ ಅರಿಕೇರೆ, ರಾಜು ಮ್ಯಾಗೇರಿ, ರಾಜು ಎಂ ನರಸೆಗೊಂಡರ, ಧ್ರಾಕ್ಷಾಯಿಣಿ ಗದಗಿಮಠ, ಮಂಜಪ್ಪ ಕನಕೇರಿ ರವರಿಗೆ ನೊಂದಣಿ ಅಂಚೆ ಮೂಲಕ ನೋಟಿಸ್ ಜಾರಿ ಮಾಡಲಾಯಿತು.

2. ದಿ: 23-12-2019 ರಂದು ವಾದಿಯರಿಗೆ ಸೇರಿದ ರಿ ಸ ನಂ. 757/4 ರ ಜಮೀನಿಗೆ ಬೆಳಿಗ್ಗೆ ಸುಮಾರು 10.00 ಗಂಟೆಗೆ ಹೋಗಲಾಯಿತು. ಸ್ಥಳದಲ್ಲಿ ಲೀಯಾಕತ್ ಅಲಿ ರಬ್ಬಾನಿ, ರಾಜು ಎಂ ನರಸೆಗೊಂಡರ, ಸಿದ್ದಪ್ಪ ಕನಕೇರಿ ಹಾಗೂ ಅರ್ಜಿದಾರರು ಹಾಜರಿದ್ದರು. ಅವರ ಸಮಕ್ಷಮ ಅರ್ಜಿದಾರರಿಗೆ ತೋರಿಸಿದ ಆಸ್ತಿಯನ್ನು ಅಳತೆ ಮಾಡಿ ಸರ್ವೆ ದಾಖಲೆಗಳ ಪ್ರಕಾರ ಹುದ್ದು ಬಸ್ತು ನಿಗದಿಪಡಿಸಲಾಯಿತು. ಸ್ಥಳದಲ್ಲಿಯೇ ವರದಿ ಸಿದ್ದಪಡಿಸಿ, ರಾಜು ಎಂ ನರಸೆಗೊಂಡರ, ಸಿದ್ದಪ ಕನಕೇರಿ ಹಾಗೂ ಅರ್ಜಿದಾರರು ಸಹಿ ಮಾಡಿರುತ್ತಾರೆ. ಅವರ ಹೇಳಿಕೆ ಪಡೆದುಕೊಂಡು ಕಛೇರಿಗೆ ಹಿಂತಿರುಗಿ ನಕ್ಷೆ ಸಿದ್ದಪಡಿಸಿರುತ್ತೇನೆ. ಅಳತೆ ಕಾಲಕ್ಕೆ ಅರ್ಜಿದಾರರ ಆಸ್ತಿ

**ಪಿ ಡಬ್ಲ್ಯೂ: 3**

ಪೈಕಿ 17 ಗುಂಟೆ ಜಮೀನನ್ನು ರಿ ಸ ನಂ. 757/3 ರ ಮಾಲೀಕರು ಒತ್ತುವರಿ ಮಾಡಿಕೊಂಡಿರುವುದು ಕಂಡು ಬಂದಿರುತ್ತದೆ. ಸದರಿ ಒತ್ತುವರಿ ಭಾಗವನ್ನು ಗುಲಾಬಿ ಬಣ್ಣದಿಂದ ತೋರಿಸಲಾಗಿರುತ್ತದೆ.

3. ಸಾಕ್ಷಿದಾರರು ಈಗಾಗಲೇ ನಿಪಿ-20 ಎಂದು ಗುರುತಿಸಲಾಗಿರುವ ಸರ್ವೆ ಸ್ಕೆಚ್ ಅನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ/-

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.